SL. No. : NNN

**CCE RF**

ಒಟ್ಟು ಪ್ರಶ್ನೆಗಳ ಸಂಖ್ಯೆ : 25 + 25 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

Total No. of Questions : 25 + 25 ] [ Total No. of Printed Pages : 8

**ಸಂಕೇತ ಸಂಖ್ಯೆ : 98-K** **Code No. : 98-K**

# ವಿಷಯ : ಕರ್ನಾಟಕ ಸಂಗೀತ / ಹಿಂದೂಸ್ಥಾನಿ ಸಂಗೀತ — ಶಾಸ್ತ್ರ ವಿಭಾಗ

## Subject : CARNATIC MUSIC / HINDUSTANI MUSIC — THEORY

**(ಹೊಸ ಪಠ್ಯಕ್ರಮ / New Syllabus)**

**(ಶಾಲಾ ಅಭ್ಯರ್ಥಿ / Regular Fresh)**

**(ಕನ್ನಡ ಭಾಷಾಂತರ / Kannada Version)**

**(ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳುವುದು)**

ದಿನಾಂಕ : 07. 04. 2017 ] [ Date : 07. 04. 2017

ಸಮಯ : ಮಧ್ಯಾಹ್ನ 2-00 ರಿಂದ ಸಂಜೆ 5-15 ರವರೆಗೆ ] [ Time : 2-00 P.M. to 5-15 P.M.

ಗರಿಷ್ಠ ಅಂಕಗಳು : 40 ] [ Max. Marks : 40

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 25 + 25 ವಸ್ತುನಿಷ್ಠ ಮತ್ತು ವಿಷಯನಿಷ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**

ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

# (ಕರ್ನಾಟಕ ಸಂಗೀತ)

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $8 \times 1 = 8$

1. ಇದು ಪ್ರತಿಮಧ್ಯಮ ರಾಗ

   (A) ಮಾಯಾಮಾಳವಗೌಳ (B) ಧೀರ ಶಂಕರಾಭರಣ

   (C) ಮೇಚ ಕಲ್ಯಾಣಿ (D) ಹರಿಕಾಂಭೋಜಿ

2. ಈ ವಾದ್ಯವು ತಾಳವಾದ್ಯವಾಗಿದೆ

   (A) ಮೃದಂಗ (B) ತಂಬೂರಿ

   (C) ಪಿಟೀಲು (D) ವೀಣೆ

3. ಕಾಮವರ್ಧಿನಿ ರಾಗದ ಪ್ರತಿಮಧ್ಯಮವನ್ನು ತೆಗೆದು ಶುದ್ಧಮಧ್ಯಮವನ್ನು ಹಾಕಿದರೆ. ಈ ರಾಗವಾಗುತ್ತದೆ

   (A) ಕಲ್ಯಾಣಿ (B) ಮಾಯಾಮಾಳವಗೌಳ

   (C) ಶಂಕರಾಭರಣ (D) ಖರಹರಪ್ರಿಯ

4. ಏಳು ಅಕ್ಷರವನ್ನು ಹೊಂದಿರುವ ತಾಳ ಇದಾಗಿದೆ

   (A) ಧ್ರುವ ತಾಳ (B) ಏಕ ತಾಳ

   (C) ತ್ರಿಪುಟ ತಾಳ (D) ಝಂಪೆ ತಾಳ

5. ರಾಷ್ಟ್ರಗೀತೆಯನ್ನು ರಚಿಸಿದ ಕವಿ

   (A) ದ.ರಾ. ಬೇಂದ್ರೆ (B) ಕುವೆಂಪು

   (C) ಬಂಕಿಮ ಚಂದ್ರ ಚಟರ್ಜಿ (D) ರವೀಂದ್ರನಾಥ್ ಠಾಗೂರ್

6. ಖಂಡಜಾತಿ ಅಟತಾಳವು ಈ ಅಂಗಗಳನ್ನು ಹೊಂದಿದೆ

(A) 1 0 1 1 (B) 1 1 0 0

(C) 1 0 1 (D) 0 1

7. 15ನೇ ಮೇಳಕರ್ತ ಈ ರಾಗವಾಗಿದೆ

(A) ಕಲ್ಯಾಣಿ (B) ಶಂಕರಾಭರಣ

(C) ಮಾಯಾಮಾಳವಗೌಳ (D) ಹರಿಕಾಂಭೋಜಿ

8. ಪ್ರಕೃತಿ ಸ್ವರಗಳು ಇದಾಗಿದೆ

(A) ಸ, ಪ (B) ರಿ, ಧ

(C) ಗ, ನಿ (D) ಮ, ಧ

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ :** 8 × 1 = 8

9. ಸ್ವರಗಳ ಕ್ರಮವಾದ ಏರುವಿಕೆಗೆ ಏನೆಂದು ಹೆಸರು ?

10. 3ನೇ ಕಾಲದ ಸರಳೆಯನ್ನು ಹಾಡುವಾಗ ಒಂದು ಎಣಿಕೆಗೆ ಎಷ್ಟು ಅಕ್ಷರಗಳು ಬರುತ್ತವೆ ?

11. ಸಪ್ತಸ್ವರಗಳ ಕ್ರಮವಾದ ಮತ್ತು ಸರಳವಾದ ಜೋಡಣೆಗೆ ಏನೆಂದು ಹೆಸರು ?

12. ಮಣ್ಣಿನಿಂದ ಮಾಡಿರುವ ತಾಳವಾದ್ಯವನ್ನು ಹೆಸರಿಸಿ.

13. 'ಕರ್ನಾಟಕ ಸಂಗೀತ ಪಿತಾಮಹ' ಎಂದು ಯಾರನ್ನು ಕರೆಯಲಾಗಿದೆ ?

14. ಬಸವಣ್ಣನವರ ಜನ್ಮಸ್ಥಳವನ್ನು ತಿಳಿಸಿ.

15. ಲಘುವಿನಲ್ಲಿ ಎಷ್ಟು ವಿಧ ?

16. ಯಾವುದಾದರೂ ಒಂದು ಉಪಾಂಗ ರಾಗವನ್ನು ಹೆಸರಿಸಿ.

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** $7 \times 2 = 14$

17. ತಾಳದ ಅಂಗಗಳನ್ನು ಹೆಸರಿಸಿ, ಚಿಹ್ನೆ ಮತ್ತು ಅಕ್ಷರಗಳನ್ನು ಬರೆಯಿರಿ.

18. ರಿಷಭ ಮತ್ತು ಗಾಂಧಾರ ಸ್ವರ ಪ್ರಭೇದಗಳನ್ನು ತಿಳಿಸಿ.

19. ಯಾವುದಾದರೂ ಎರಡು ಶುದ್ಧಮಧ್ಯಮ ಹಾಗೂ ಪ್ರತಿಮಧ್ಯಮವಿರುವ ಜನಕ ರಾಗಗಳನ್ನು ಹೆಸರಿಸಿ.

20. ಜಂಟಿ ವರಸೆ ಎಂದರೇನು ?

21. ಕರ್ನಾಟಕ ಮತ್ತು ಹಿಂದೂಸ್ಥಾನಿ ಪದ್ಧತಿಯಲ್ಲಿ ಕಂಡುಬರುವ ರಾಗಗಳನ್ನು ಹೆಸರಿಸಿ. (ನಾಲ್ಕು ರಾಗಗಳು)

22. ಮೋಹನ ರಾಗದ ಲಕ್ಷಣವನ್ನು ಬರೆಯಿರಿ.

23. ಆವರ್ತ ಎಂದರೇನು ?

IV. **ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :** $2 \times 5 = 10$

24. ಪುರಂದರದಾಸರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

25. ಅಭ್ಯಾಸಗಾನದ ರಚನೆಗಳನ್ನು ಹೆಸರಿಸಿ. ಯಾವುದಾದರೂ ನಾಲ್ಕನ್ನು ವಿವರಿಸಿ.

# (ಹಿಂದೂಸ್ಥಾನಿ ಸಂಗೀತ)

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $8 \times 1 = 8$

1. ಆರೋಹಣ–ಅವರೋಹಣದಲ್ಲಿ 5 ಸ್ವರಗಳನ್ನು ಉಪಯೋಗಿಸಿದರೆ ಅದನ್ನು ಹೀಗೆ ಕರೆಯುವರು

   (A) ಸಂಪೂರ್ಣ (B) ಔಢವ

   (C) ಷಾಢವ (D) ಷಾಢವ ಸಂಪೂರ್ಣ

2. ಸ್ವರಗಳ ಕೆಳಗೆ (ಮ಼ ಧ಼ ನಿ಼) ಹೀಗೆ ಚುಕ್ಕಿಗಳಿದ್ದರೆ ಆ ಸ್ವರಗಳು

   (A) ಮಂದ್ರ ಸಪ್ತಕ (B) ಮಧ್ಯ ಸಪ್ತಕ

   (C) ತಾರ ಸಪ್ತಕ (D) ಅತಿ ತಾರ ಸಪ್ತಕ

3. ರಾಗದ ಸ್ವರಗಳನ್ನು ತಾಳಬದ್ಧವಾಗಿ ಹಾಡುವ ಗೀತೆ

   (A) ಸ್ವರಮಾಲಿಕಾ (ಸುರಾವಟ) (B) ಲಕ್ಷಣಗೀತೆ

   (C) ಧ್ರುಪದ (D) ತರಾನಾ

4. ತ್ರಿತಾಲದ ಯಾವ ಮಾತ್ರದ ಮೇಲೆ ಹುಸಿ ಇದೆ

   (A) 9ನೇ ಮಾತ್ರಾ (B) 11ನೇ ಮಾತ್ರಾ

   (C) 13ನೇ ಮಾತ್ರಾ (D) 14ನೇ ಮಾತ್ರಾ

5. ಭೂಪ ರಾಗದಲ್ಲಿ ಯಾವ ಸ್ವರಗಳು ವರ್ಜ್ಯವಿರುತ್ತದೆ

   (A) ಮ ನಿ (B) ಮ ಸಾ

   (C) ಮ ಧ (D) ಮ ಪ

6. ರಾಷ್ಟ್ರಗೀತೆಯ ರಚನಾಕಾರರು

(A) ಗಾಂಧೀಜಿ (B) ರವೀಂದ್ರನಾಥ ಠಾಗೂರ್

(C) ಕುವೆಂಪು (D) ಶಿವರಾಮ ಕಾರಂತ

7. ಏಳು ಸ್ವರಗಳ ಗುಂಪು

(A) ಪ್ರತಿಪದ (B) ಸಪ್ತಕ

(C) ಕೋಮಲಸ್ವರ (D) ಅಷ್ಟಕ

8. ಒಂದು ಪೆಟ್ಟು ಒಂದು ಹುಸಿ ಇರುವ ತಾಳ

(A) ರೂಪಕ (B) ಏಕ ತಾಲ

(C) ತ್ರಿತಾಲ (D) ದಾದರಾ

II. **ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ :** $8 \times 1 = 8$

9. ಪಂಡಿತ್ ವಿಷ್ಣು ದಿಗಂಬರ ಪಲುಸ್ಕರ ಲೇಖನ ಪದ್ಧತಿ ಪ್ರಕಾರ ತಾಳದ ಹುಸಿಯ ಚಿಹ್ನೆ ಯಾವುದು ?

10. ಸಪ್ತಕದಲ್ಲಿ ಎಷ್ಟು ಪ್ರಕಾರಗಳಿವೆ ?

11. ಏಕ ತಾಳದಲ್ಲಿ ಎಷ್ಟು ಹುಸಿಗಳಿವೆ ?

12. ಸ್ವರಗಳ ಏರಿಕೆ ಕ್ರಮಕ್ಕೆ ಏನ್ನೆನುತ್ತಾರೆ ?

13. ಕೋಮಲ ಸ್ವರ ಎಂದರೇನು ?

14. ಸಪ್ತಕದಲ್ಲಿ ಅಚಲ ಸ್ವರಗಳು ಯಾವುವು ?

15. ವರ್ಜಿತ ಸ್ವರ ಎಂದರೇನು ?

16. ಸಂವಾದಿ ಸ್ವರ ಎಂದರೇನು ?

III. **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ :** 7 × 2 = 14

17. ಸಾರಂಗ ರಾಗದ ವಾದಿ–ಸಂವಾದಿ ಬರೆದು, ಆ ರಾಗದ ಆರೋಹಣ–ಅವರೋಹಣ ಬರೆಯಿರಿ.

18. ತಾಳ ಎಂದರೇನು ? ವಿವರಿಸಿ ಮತ್ತು ದಾದರಾ ತಾಳದ ಮಾಹಿತಿ ಬರೆದು, ಲಿಪಿಬದ್ಧಗೊಳಿಸಿ.

19. ನೀವು ಕಲಿತಿರುವ ಒಂದು ಲಕ್ಷಣಗೀತೆಯ ಸಾಹಿತ್ಯ ಬರೆಯಿರಿ.

20. ಸ್ಥಾಯಿ ಹಾಗೂ ಅಂತರಾ ಎಂದರೇನು ? ವಿವರಿಸಿ ಬರೆಯಿರಿ.

21. ಗಾಯನ ಸಮಯ ಎಂದರೇನು ? ಭೂಪ ರಾಗದ ಗಾಯನ ಸಮಯ ಯಾವುದು ?

22. ಹಿಂದೂಸ್ಥಾನಿ ಸಂಗೀತದ ಹತ್ತು ಥಾಟ್‌ಗಳ ಹಸರು ಬರೆಯಿರಿ.

23. ತಾನ ಎಂದರೇನು ?

IV. **ಈ ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :** 2 × 5 = 10

24. ಭಾಗೇಶ್ರೀ ರಾಗದ ಮಾಹಿತಿ ಬರೆಯಿರಿ.

25. ಐದು ಸಂಗೀತ ವಾದ್ಯಗಳ ಹೆಸರು ಬರೆಯಿರಿ.